**COHERENCE** – The Multidisciplinary Research Journal
ISSN: 0976-5301
Volume No: 16, Issue No: 1, Year: 2025 (January-June)
Peer Reviewed & Refereed Journal (IF: 7.85)
PP: 136-138
Journal Website www.coherencejournal.in

# ಅಭಿವೃದ್ಧಿ : ಒಂದು ಪರಿಕಲ್ಪನಾತ್ಮಕ ಚರ್ಚೆ

## (ABHIVRUDDHI : ONDU PARIKALPANATHMAKA CHARCHE)

**Ganesha**

Associate Professor
Department of Kannada, GFGC, H.D. Kote, Mysore District

‘ಅಭಿವೃದ್ಧಿ’ ಎನ್ನುವ ಪದ ಕಳೆದ 60 ವರ್ಷಗಳಲ್ಲಿ ತೀವ್ರವಾದ ಚರ್ಚೆಗೊಳಗಾಗಿದೆ. ‘ಅಭಿವೃದ್ಧಿ’ ಪರಿಕಲ್ಪನೆ ಕುರಿತು ಸಾಕಷ್ಟು ಮೆಚ್ಚುಗೆಯ ಮಾತುಗಳು ಮತ್ತು ಟೀಕೆಗಳು ಜೊತೆಜೊತೆಯಲ್ಲಿಯೇ ಸಾಗಿಬಂದಿವೆ. ಹಾಗಿದ್ದರೆ ಈ ಪರಿಕಲ್ಪನೆಯನ್ನು ಹೆಚ್ಚು ಹೆಚ್ಚು ಬಳಸುತ್ತಿರುವವರು ಯಾರು? ಇದರೊಂದಿಗೆ ತಗಲು ಹಾಕಿಕೊಂಡಿರುವ ಸಿದ್ಧಾಂತಗಳಾವುವು? ಅಭಿವೃದ್ಧಿಯ ಮುಖ್ಯ ಗುರಿ ಏನು? ಈ ಪ್ರಶ್ನೆಗಳನ್ನು ಕೇಳಿಕೊಳ್ಳುವುದರೊಂದಿಗೆ ‘ಅಭಿವೃದ್ಧಿ’ ವ್ಯಕ್ತಿಕೇಂದ್ರಿತವೋ? ಜೀವಕೇಂದ್ರಿತವೋ? ಎಂಬ ಸ್ಪಷ್ಟತೆಯನ್ನು ಪಡೆದುಕೊಳ್ಳುವುದು ಈ ಲೇಖನದ ಮುಖ್ಯ ಕಾಳಜಿಯಾಗಿದೆ. ಅಭಿವೃದ್ಧಿ ಕೇವಲ ಆರ್ಥಿಕವೇ? ಸಾಮಾಜಿಕ, ರಾಜಕೀಯ, ನಿಸರ್ಗಕೇಂದ್ರಿತ ವಿವೇಕಗಳನ್ನು ಒಳಗೊಂಡಿದೆಯೇ? ಎಂಬ ಅಂಶಗಳನ್ನು ಚರ್ಚಿಸಲಾಗಿದೆ.

ಎರಡನೇ ಮಹಾಯುದ್ಧದ ಮುಕ್ತಾಯದ ಹೊತ್ತಿಗೆ ‘ಅಭಿವೃದ್ಧಿ’ಯು ಹೊಟ್ಟೆ–ಬಟ್ಟೆ–ವಸತಿಗೆ ಪರಿತಪಿಸುವ ಜನರ ಕನಸುಗಳನ್ನು ಈಡೇರಿಸುವ ಪದವಾಗಿತ್ತು. ವಸಾಹತುಗಳಿಂದ ಬಿಡುಗಡೆ, ಹಸಿವೆ–ಶೋಷಣೆಗಳಿಂದ ಮುಕ್ತಿ, ದುಃಖ–ದುಮ್ಮಾನಗಳಿಲ್ಲದ ನವಜೀನವದ ಆಶೋತ್ತರಗಳನ್ನು ಸಂಕೇತಿಸುವ ಪರಿಕಲ್ಪನೆಯಾಗಿತ್ತು. ಅಂದಿನಿಂದ ಪ್ರಸ್ತುತದವರೆಗೂ ಆಧುನಿಕ ಅರ್ಥಶಾಸ್ತ್ರ ಮತ್ತು ರಾಷ್ಟ್ರೀಯ, ಅಂತರಾಷ್ಟ್ರೀಯ ಸಂಸ್ಥೆಗಳ ಹೊಸ ಪರಿಭಾಷೆಯಲ್ಲಿ ಬೆಳವಣಿಗೆ ಮತ್ತು ಪರಿವರ್ತನೆಗಳನ್ನು ಸೂಚಿಸಲು, ಅದರಲ್ಲೂ ವಿಶೇಷವಾಗಿ ಆಧುನೀಕರಣದ ಯತ್ನಗಳು, ಬಡತನ ನಿರ್ಮೂಲನ ಹಾಗೂ ಆರ್ಥಿಕ ಹಿಂದುಳಿದಿರುವಿಕೆ, ಅಪೌಷ್ಠಿಕತೆ, ನಿರ್ವಸತಿ, ರೋಗರುಜಿನ, ಅನಕ್ಷರತೆ ಮತ್ತು ಸಾಮಾಜಿಕ ಆರ್ಥಿಕ ಅಸಮಾನತೆ ಮುಂತಾದ ಸಮಸ್ಯೆಗಳ ಪರಿಹಾರೋಪಾಯದ ಕುರಿತು ಹೇಳಲು ಅಭಿವೃದ್ಧಿ ಎಂಬ ಪದವನ್ನೇ ಬಳಸಲಾಗುತ್ತಿದೆ.

“ವಿಶ್ವಸಂಸ್ಥೆಯ 50ನೆಯ ವರ್ಷಾಚರಣೆಯ ಸಂದರ್ಭದಲ್ಲಿ, ಆ ಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳೂ ಸರ್ವಾನುಮತದಿಂದ ಅಭಿವೃದ್ಧಿಯ ಪರಿಕಲ್ಪನೆಯನ್ನು ಯಾಕೆ ಅನುಮೋದಿಸಿದರು? ಯಾಕೆ ಅಭಿವೃದ್ಧಿಯ ಆಶಯಗಳಿಗೆ ಜಾಗತಿಕ ಮಟ್ಟದ ಬದ್ಧತೆಬೇಕು ಎಂದು ಕರೆಕೊಟ್ಟರು? ಈ ಪ್ರಶ್ನೆಯನ್ನು ಮತ್ತೆ ಮತ್ತೆ ಕೇಳಲಾಗಿದೆ. ಇದಕ್ಕೆ ಉತ್ತರವನ್ನು ಎರಡು ವಿಭಿನ್ನ ಬಗೆಯ ಕಾರಣಗಳಲ್ಲಿ ಕಂಡುಕೊಳ್ಳಬಹುದಾಗಿದೆ. ಮೊದಲನೆಯ ಕಾರಣ, ‘ಹಿಂದುಳಿದಿರುವಿಕೆ’ ಎಂಬ ನುಡಿಗಟ್ಟನ್ನು ಚಾಲ್ತಿಗೆ ತಂದು ಅದನ್ನು ತಮ್ಮ ಉದ್ದೇಶಗಳಿಗೆ ತಕ್ಕಂತೆ ದುಡಿಸಿಕೊಳ್ಳಲು ಅನುಕೂಲವಾಗುವಂತೆ, ಆಧುನಿಕ ಅರ್ಥವ್ಯವಸ್ಥೆಗಳ ನೇತಾರರು, ಅದಕ್ಕೆ ತಮ್ಮದೇ ಆದ ಅರ್ಥಗಳನ್ನು ಹಚ್ಚಿದ್ದು. ಒಂದು ನೂರು ವರ್ಷಗಳಿಗೂ ಕಡಿಮೆ ಕಾಲಾವಧಿಯಲ್ಲಿ, ಈ ನೇತಾರರು, ಹೆಚ್ಚು ಕಡಿಮೆ ಜಗತ್ತಿನ ಎಲ್ಲ ಭಾಷೆಗಳಲ್ಲೂ, ಆಧುನಿಕ ಅರ್ಥವ್ಯವಸ್ಥೆ ರೂಪುಗೊಳ್ಳುವುದಕ್ಕೆ ಮೊದಲೇ ಇದ್ದ ಎಲ್ಲ ಬಗೆಯ ಸಮಸ್ಯೆ ಮತ್ತು ಸಂಕಷ್ಟಗಳಿಗೂ ‘ಹಿಂದುಳಿದಿರುವಿಕೆ’ ಎಂಬ ಈ ಹೊಸ ಸಂರಚನೆಯನ್ನು ಸಂವಾದಿಯನ್ನಾಗಿ ಮಾಡುವುದರಲ್ಲಿ ಸಫಲರಾದರು. ಲೋಕಜೀವನದ ಸಮಸ್ತವನ್ನೂ ಕಪ್ಪು–ಬಿಳುಪು, ಒಳಿತು–ಕೆಡುಕು, ಸುಖ–ದುಃಖ, ನ್ಯಾಯ–ಅನ್ಯಾಯ ಹೀಗೆ ಕೇವಲ ಎರಡು ಬಗೆ ಎಂದು ವಿಂಗಡಿಸಿ ನೋಡುವ ಯೋಚನಾಕ್ರಮವೇ ಪ್ರಧಾನವಾಗಿರುವ ಆಧುನಿಕ ಜಗತ್ತಿನಲ್ಲಿ ಗತಕಾಲದ ಬಳುವಳಿಯಾಗಿರುವ ಎಲ್ಲ ಸಂಕಷ್ಟಗಳಿಗೂ ‘ಅಭಿವೃದ್ಧಿ’ಯು ಪ್ರಶ್ನಾತೀತವಾದ ಏಕೈಕ ಪರಿಹಾರ ಎಂಬ ವಾದವನ್ನು ಮುಂದಿಡಲಾಯಿತು. ಇದನ್ನೇ ಬೇರೆ ಶಬ್ದಗಳಲ್ಲಿ ವಿವರಿಸುವುದಾದರೆ ಈ ಜಗತ್ತಿನ ಎಲ್ಲ ನೊಂದವರಿಗೂ ಯಥಾಸ್ಥಿತಿ ಅಥವಾ ‘ಅಭಿವೃದ್ಧಿ’ಯ ಸುಖೀಜೀನವದ ಆಶ್ವಾಸನೆ–ಎರಡರಲ್ಲಿ ಒಂದು ಆಯ್ದುಕೊಳ್ಳುವ ಮುಕ್ತ ಸ್ವಾತಂತ್ರ್ಯ, ಚರಿತ್ರೆಯಲ್ಲೇ ಮೊದಲ ಬಾರಿಗೆ ಅವರಿಗೆ ಕೊಡಲಾಗಿದೆ[1]”

ಆದರೆ “ನಿಜವಾದ ಅಭಿವೃದ್ಧಿ ಇದ್ದಲ್ಲಿ ಸಂಘರ್ಷ ಇರಲೇಬೇಕು. ಏಕೆಂದರೆ ನಿಜವಾದ ಅಭಿವೃದ್ಧಿ ಈಗಾಗಲೇ ಕೆಲವರಲ್ಲೇ ಕ್ರೂಢೀಕರಣಗೊಂಡಿರುವ ಅಧಿಕಾರವನ್ನು ಡಿಸ್ಟರ್ಬ ಮಾಡುತ್ತದೆ. ಕೆಲವರಲ್ಲೇ ಕ್ರೂಢೀಕರಣಗೊಂಡ ಅಧಿಕಾರ ಡಿಸ್ಟರ್ಬಗೊಂಡರೆ ಮಾತ್ರ ಅಧಿಕಾರರಹಿತರು ಅಲ್ಪಸ್ವಲ್ಪ ಅಧಿಕಾರ ಗಳಿಸಲು ಸಾಧ್ಯವೆನ್ನುವ ಗ್ರಹಿಕೆಯನ್ನು ಒಪ್ಪಬೇಕು. ಈ ದೃಷ್ಟಿಯಿಂದ ವಿವಿಧ ಅಭಿವೃದ್ಧಿ ಪರಿಕಲ್ಪನೆಗಳು ವಿವಿಧ ಗುಂಪುಗಳ ಆಸಕ್ತಿಗಳನ್ನು ಪ್ರತಿನಿಧಿಸುತ್ತಿವೆ ಎನ್ನಬಹುದು (ಬೆನಿಯನ್ 2009). ಸೋಶಿಯಲಿಸ್ಟ್ ಅಭಿವೃದ್ಧಿ ತಳವರ್ಗದ ಆಸಕ್ತಿಯನ್ನು ಪ್ರತಿನಿಧಿಸಿದರೆ, ಕ್ಯಾಪಿಟಲಿಸ್ಟ್ ಅಭಿವೃದ್ಧಿ ಮೇಲ್ವರ್ಗದ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತಿದೆ. ಆರ್ಥಿಕಾಭಿವೃದ್ಧಿ ಅಥವಾ ಸರಕು ಸೇವೆಗಳ ಉತ್ಪಾದನೆ ಮತ್ತು ಪೂರೈಕೆಗೆ ಮಹತ್ವ ನೀಡುವ ಅಭಿವೃದ್ಧಿ ಬೃಹತ್ ಉದ್ದಿಮೆಗಳ ಮತ್ತು ದೊಡ್ಡ ಕೃಷಿಕರ ಆಸಕ್ತಿಯನ್ನು ಪ್ರತಿನಿಧಿಸಿದರೆ, ಮಾನವ ಅಭಿವೃದ್ಧಿ ಸಮಾಜದ ಎಲ್ಲರಿಗೂ ಶಿಕ್ಷಣ, ಆರೋಗ್ಯಗಳನ್ನು ನೀಡುವ ಮೂಲಕ ಎಲ್ಲರ ಆಸಕ್ತಿಗಳನ್ನು ಪ್ರತಿನಿಧಿಸಬಹುದು. ಅಭಿವೃದ್ಧಿಯನ್ನು ನಗರೀಕರಣ, ಕೈಗಾರಿಕೀಕರಣಗಳಿಗೆ ಸಮೀಕರಿಸಿದರೆ ಗ್ರಾಮೀಣ ಜನರ ಅಭಿವೃದ್ಧಿ ಮತ್ತು ಕೃಷಿ


© Copyright @ Authors

ಕುಂಠಿತಗೊಳ್ಳಬಹುದು. ಹೀಗೆ ಅಭಿವೃದ್ಧಿ ಕೇವಲ ಆರ್ಥಿಕ ಕ್ಷೇತ್ರಕ್ಕೆ ಸೀಮಿತವಾದ ಪ್ರಶ್ನೆಯಲ್ಲ. ಅಭಿವೃದ್ಧಿ ಸಮಾಜದ ಎಲ್ಲ ಅಂಗಗಳನ್ನು ಪ್ರಭಾವಿಸುವ ಮತ್ತು ಮರುರೂಪಿಸುವ ಕೆಲಸ ಮಾಡುತ್ತಿದೆ. ಹಾಗಾಗಿ ಇಂದು ಅಭಿವೃದ್ಧಿಯ ಅರ್ಥ, ವ್ಯಾಖ್ಯಾನಗಳ ಚರ್ಚೆಯಲ್ಲಿ ಸಮಾನತೆ, ಸ್ವಾತಂತ್ರ್ಯ, ಸ್ವಾಯತ್ತತೆಯ ಪ್ರಶ್ನೆಗಳೂ ಸೇರಿಕೊಂಡಿವೆ[2]". ಆದ್ದರಿಂದ "ವಿಶ್ವಸಂಸ್ಥೆ ಈಗ ಚಾಲ್ತಿಗೆ ತಂದಿರುವ ಒಂದು ನುಡಿಗಟ್ಟನ್ನು ಬಳಸಿಕೊಂಡು ಅಭಿವೃದ್ಧಿಯ ಪರಿಕಲ್ಪನೆಯ ಬಗ್ಗೆ ಮಾನವೀಯ ಮುಖವುಳ್ಳ ಅಭಿವೃದ್ಧಿ ಸಾಧ್ಯವೇ? ಎಂದು ಪ್ರಶ್ನಿಸಬಹುದಾಗಿದೆ. ಅಭಿವೃದ್ಧಿಯ ಸಂಕಥನ ಹಾಗೂ ಅದರ ಅನುಷ್ಠಾನದ ಪ್ರಾರಂಭಿಕ ಹಂತಗಳಲ್ಲಿ ಕಾಣಿಸಿಕೊಂಡ ಸೋಲುಗಳಿಂದ ಕಂಗೆಟ್ಟ ಒಂದು ತಲೆಮಾರಿನ ಸಜ್ಜನರು ಆಧುನೀಕರಣದ ಅಗತ್ಯ ಇರುವ ಜನ ಸಮುದಾಯಗಳಿಗೆ ಒಳ್ಳೆಯ ಅಭಿವೃದ್ಧಿಯನ್ನು ತಲುಪಿಸುವುದು ಹೇಗೆ ಎಂದು ತಲೆ ಕೆಡಿಸಿಕೊಂಡಿರುವುದು ಸ್ಪಷ್ಟವಾಗಿದೆ. ಈ ಸಜ್ಜನರ ಪ್ರಯತ್ನಗಳಿಂದಾಗಿ ಸ್ಥಳೀಯ ಅಭಿವೃದ್ಧಿ, ಮಾನವಕೇಂದ್ರಿತ ಅಭಿವೃದ್ಧಿ, ತಳಮಟ್ಟದ ಜನರು ಪಾಲುಗೊಳ್ಳುವಂತಹ ಅಭಿವೃದ್ಧಿ ಮತ್ತು ಕೊನೆಯದಾಗಿ ಪರಿಸರ ತಾಳಿಕೊಳ್ಳುವಂತಹ ಅಭಿವೃದ್ಧಿ–ಇತ್ಯಾದಿ ಇತ್ಯಾದಿ, ಹೀಗೆ ಅಭಿವೃದ್ಧಿಯ ವಿಭಿನ್ನ ಪರಿಷ್ಕೃತ ಪರಿಕಲ್ಪನೆಗಳು ರೂಪುಗೊಂಡಿವೆ[3]"

ಅಭಿವೃದ್ಧಿಯ ಈ ಪರಿಷ್ಕೃತ ವ್ಯಾಖ್ಯಾನಗಳಿಗೆಲ್ಲ ಮೂಲಾಧಾರವಾಗಿರುವುದು ಒಂದೇ–ಅದು ಅಭಿವೃದ್ಧಿ ಕಾರ್ಯಕ್ರಮಗಳು ಎಲ್ಲ ಮನುಷ್ಯ ಕ್ರಿಯೆಗಳನ್ನು ಆಧುನಿಕ ಉತ್ಪಾದನೆಯ ಚೌಕಟ್ಟಿನೊಳಗೆ ತರಬೇಕು ಎಂಬ ಗ್ರಹಿಕೆ. ಈ ಬಗೆಯ ಹುಸಿ ಪರ್ಯಾಯಗಳಿಂದ ಜನರ ಸ್ವಂತದ ಹಾಗೂ ಸ್ವಾಯತ್ತವಾದ ಜೀವನಕ್ರಮಗಳನ್ನು ಹಾಗೂ ಉತ್ಪಾದನೆಯ ವಿಧಾನಗಳನ್ನು ನಾಶಪಡಿಸಲು ವ್ಯವಸ್ಥೆಗೆ ಇನ್ನಷ್ಟು ಸುಲಭವಾಗುತ್ತದೆ. 'ಜನ ಪಾಲುಗೊಳ್ಳುವ', 'ಒಳ್ಳೆಯ' ಅಭಿವೃದ್ಧಿ ಕಾರ್ಯಕ್ರಮಗಳು ಹೆಚ್ಚೆಂದರೆ ತಾತ್ಕಾಲಿಕ ಉಪಶಮನಗಳು. ಆದ್ದರಿಂದ ಸಂಪನ್ಮೂಲಗಳ ನಿರ್ವಹಣೆ ಮತ್ತು ಸುಸ್ಥಿರ ಅಭಿವೃದ್ಧಿ ನಮ್ಮ ವರ್ತಮಾನದ ತುರ್ತಾಗಿದೆ. ವ್ಯಕ್ತಿಯೊಬ್ಬ ಶೋಷಣೆಯ ವಿರುದ್ಧ ಬಂಡೇಳುವಂತೆ ಪ್ರಕೃತಿಯು ತನ್ನದೇ ರೀತಿಯಲ್ಲಿ ಬಂಡುಕೋರತನದಿಂದ ನರ್ತಿಸುತ್ತದೆ. ಮನುಷ್ಯಕೇಂದ್ರಿತ (ಮೇಲುಸ್ತರದ, ಉಳ್ಳವರ) ಅಭಿವೃದ್ಧಿಯು ಪ್ರಕೃತಿಯನ್ನು ಹಿತಮಿತವಾಗಿ ಬಳಸುವ ಅಂಶವನ್ನು ಹೊಂದಿರಬೇಕು. ಸುಸ್ಥಿರ ಅಭಿವೃದ್ಧಿಯು ಸಂಪನ್ಮೂಲಗಳ ದುಂದುಬಳಕೆಯನ್ನು ವಿರೋಧಿಸುವುದರೊಂದಿಗೆ ಮುಂದಿನ ಪೀಳಿಗೆಯ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಸಂಪನ್ಮೂಲಗಳನ್ನು ಬಳಸಬೇಕೆಂದು ಹೇಳುತ್ತದೆ.

"ಸುಸ್ಥಿರ ಅಭಿವೃದ್ಧಿ ಪ್ರಕೃತಿಯನ್ನು ಹಿತಮಿತವಾಗಿ ಬಳಸಬೇಕೆನ್ನುವದರ ಮೇಲೆ ಹೆಚ್ಚು ಒತ್ತು ನೀಡುತ್ತಿದೆ. ನಿಜ. ಆದರೆ ಹಿತಮಿತ ತಪ್ಪಿರುವುದು ಏಕೆ? ಎನ್ನುವುದರ ಮೇಲೆ ಸುಸ್ಥಿರ ಅಭಿವೃದ್ಧಿ ಹೆಚ್ಚು ಗಮನ ಹರಿಸುವುದಿಲ್ಲ. ಹಿತಮಿತ ತಪ್ಪಿರುವುದು ಎಲ್ಲರಿಗೂ ಸೇರಿರುವ ಸಂಪನ್ಮೂಲವನ್ನು ಕೆಲವರೇ ಹೆಚ್ಚು ಹೆಚ್ಚು ಅನುಭೋಗಿಸುವುದರಿಂದ ಈ ಸಮಸ್ಯೆ ಸೃಷ್ಟಿಯಾಗಿದೆ. ಸುಸ್ಥಿರ ಅಭಿವೃದ್ಧಿ ಮುಂದಿನ ಜನಾಂಗದ ದೃಷ್ಟಿಯಿಂದ ಇಂದು ನಾವು ಹಿತಮಿತವಾಗಿ ಬಳಸಬೇಕೆಂದು ಹೇಳುತ್ತದೆ. ಇದೊಂದು ರೀತಿಯಲ್ಲಿ ನಮ್ಮ ಕರ್ಮ ಸಿದ್ಧಾಂತವಿದ್ದಂತೆ. ಈ ಜನ್ಮದಲ್ಲಿ ನೀವು ಕರ್ತವ್ಯಗಳನ್ನು ಚೆನ್ನಾಗಿ ನಿಭಾಯಿಸಿದರೆ ಮುಂದಿನ ಜನ್ಮದಲ್ಲಿ ನಿಮಗೆ ಉತ್ತಮ ಬದುಕು ಕಾದಿದೆ ಎನ್ನುವಂತೆ. ಸುಸ್ಥಿರ ಅಭಿವೃದ್ಧಿ ಮುಂದೆ ನಮಗೆ ಉತ್ತಮ ಬದುಕು ಸಿಗುತ್ತದೆ ಎನ್ನುವ ಬದಲು ನಮ್ಮ ಜನಾಂಗಕ್ಕೆ ಉತ್ತಮ ಬದುಕಿದೆ ಎನ್ನುತ್ತೆ. ಅಂದರೆ ಇದೇ ಜನ್ಮದಲ್ಲಿ ಕೆಲವರು ಐಷಾರಾಮ ಜೀವನ ಮಾಡುವಾಗ ಹಲವರು ಏಕೆ ಮೂರು ಹೊತ್ತಿನ ಊಟಕ್ಕೆ ಪರದಾಡಬೇಕು? ನಮ್ಮ ಪ್ರಾಕೃತಿಕ ಸಂಪನ್ಮೂಲ ಈ ಪ್ರಮಾಣದಲ್ಲಿ ಖಾಲಿಯಾಗುವುದು, ಪರಿಸರ ನಾಶವಾಗಿರುವುದು ಯಾರ ಜೀವನ ಶೈಲಿಯಿಂದ? ಮೂರು ಹೊತ್ತಿನ ಊಟಕ್ಕೆ ಪರದಾಡುವವರ ಜೀವನಶೈಲಿಯಿಂದ ಪರಿಸರ ನಾಶವಾಗಿದೆಯೇ ಅಥವಾ ಐಷಾರಾಮಿಗಳ ಜೀವನ ಶೈಲಿಯಿಂದ ಪರಿಸರ ನಾಶವಾಗಿದೆಯೇ ಎನ್ನುವ ಪ್ರಶ್ನೆ ಕೇಳುವುದೇ ಇಲ್ಲ. ಪ್ರಾಕೃತಿಕ ಸಂಪನ್ಮೂಲದ ನಾಶಕ್ಕೆ ಎಲ್ಲರನ್ನು ಬಡವ ಶ್ರೀಮಂತ ಎನ್ನುವ ಭೇದವಿಲ್ಲದ ಏಕರೂಪದಲ್ಲಿ ಇದು ಜವಾಬ್ದಾರರನ್ನಾಗಿಸುತ್ತದೆ[4]". ಆರ್ಥಿಕಾಭಿವೃದ್ಧಿ, ಸಂಪನ್ಮೂಲದ ಬಳಕೆ ಮತ್ತು ಅಭಿವೃದ್ಧಿ ನಡುವೆ ನೇರ ಸಂಬಂಧ ಕಲ್ಪಿಸಿದೆ. ಇದರಿಂದಾಗಿ ಹೆಚ್ಚು ಹೆಚ್ಚು ಅನುಭೋಗಿಸುವುದು ಅಭಿವೃದ್ಧಿಯಾದರೆ ಕಡಿಮೆ ಅನುಭೋಗಿಸುವುದು ಅನಭಿವೃದ್ಧಿಯಾಗಿದೆ. ತಳಸ್ತರದ ಜನರು ಅತ್ಯಂತ ಕಡಿಮೆ ಸಂಪನ್ಮೂಲದಲ್ಲೇ ಬದುಕುತ್ತಿದ್ದಾರೆ. ಜೊತೆಗೆ ಇವರೆಲ್ಲರೂ ಶತಮಾನಗಳಿಂದ ತಮ್ಮ ತಮ್ಮ ಸಂಸ್ಕೃತಿಯಲ್ಲಿ ರೂಢಿಗತವಾಗಿ ಬೆಳೆದು ಬಂದ ಕಸುಬು, ಉಡುಗೆ ತೊಡುಗೆ, ಊಟ ಉಪಚಾರ, ಜೀವನ ಶೈಲಿಯನ್ನು ಇಂದು ಕೂಡ ಕಾಪಾಡಿಕೊಂಡು ಬಂದಿದ್ದಾರೆ. ಆದರೆ ಇದೊಂದು ಆದರ್ಶವಾಗುವ ಬದಲು ಹಿಂದುಳಿದ, ಉಪಯೋಗವಿಲ್ಲದೆ, ಆದಷ್ಟು ಬೇಗ ನಾಶವಾಗಬೇಕಾಗಿರುವ ಜೀವನಕ್ರಮ ಎನ್ನುವ ಧೋರಣೆಯನ್ನು ಮುಖ್ಯವಾಹಿನಿಯ ಅಭಿವೃದ್ಧಿ ಚಿಂತನೆಗಳು ಮಂಡಿಸುತ್ತಾ ಬಂದಿವೆ.

"ಸುಸ್ಥಿರ ಅಭಿವೃದ್ಧಿಯಲ್ಲಿ ತಳಸ್ತರದ ಜನರ ಆದ್ಯತೆಗಳು ಪ್ರತಿನಿಧೀಕಣರಗೊಳ್ಳುವುದಿಲ್ಲ. ಆದುದರಿಂದ ಹೇಗೆ ಅಭಿವೃದ್ಧಿ ಎನ್ನುವ ಪ್ರಶ್ನೆಯನ್ನು ಕೇವಲ ಸಂಪನ್ಮೂಲ ಬಳಕೆ ಅಥವಾ ತಂತ್ರಜ್ಞಾನ ಬಳಕೆ (ಸ್ಮಾಲ್ ಈಸ್ ಬ್ಯೂಟಿಫುಲ್) ಸೀಮಿತಗೊಂಡ ಪ್ರಶ್ನೆಯಲ್ಲ. ಇದು ಅಭಿವೃದ್ಧಿ ವ್ಯಾಖ್ಯಾನಕ್ಕೂ ಸಂಬಂಧಿಸಿದ ಪ್ರಶ್ನೆ. ಅಭಿವೃದ್ಧಿಯನ್ನು ಯಾರು ವ್ಯಾಖ್ಯಾನಿಸಬೇಕು? ಇದು ಅಭಿವೃದ್ಧಿ, ಇದು ಅಭಿವೃದ್ಧಿಯಲ್ಲವೆಂದು ಯಾರು ನಿರ್ಧರಿಸಬೇಕು? ಬಹುತೇಕ ಸಂದರ್ಭದಲ್ಲಿ ಸಮಾಜದ ಬಲಾಢ್ಯರು ತೀರ್ಮಾನಿಸುತ್ತಾರೆ. ಬಡತನದ ನಿವಾರಣೆ ಬಗ್ಗೆ ಅನುಕೂಲಸ್ಥರು ತೀರ್ಮಾನಿಸುತ್ತಾರೆ[5]". ಇದರಿಂದಾಗಿಯೇ ಅಭಿವೃದ್ಧಿ ಇಷ್ಟೊಂದು ಸಮಸ್ಯಾತ್ಮಕವಾಗಿದೆ.


© Copyright @ Authors

ISSN: 0976-5301
Peer Reviewed & Refereed Journal (IF: 7.85)
Journal Website www.coherencejournal.in

ಇದಕ್ಕೆ ಪರಿಹಾರೋಪಾಯದ ಮಾರ್ಗವಾಗಿ ಗಾಂಧೀಜಿಯವರ ವಿಚಾರಗಳು ಹೀಗಿವೆ :

1. "ಗುರಿ ಮತ್ತು ಅದನ್ನು ತಲುಪಲು ನಾವು ಅನುಸರಿಸುವ ಮಾರ್ಗಗಳು ಒಂದೇ ತೆರನಾಗಿರಬೇಕು. ಅವುಗಳ ನಡುವೆ ಯಾವುದೇ ವ್ಯತ್ಯಾಸವಿರಬಾರದು. ಗುರಿಯನ್ನು ತಲುಪುವ ಆತುರದಲ್ಲಿ ನಾವು ನೀತಿಬಾಹಿರ ಮಾರ್ಗಗಳನ್ನು ತುಳಿಯಬಾರದು.
2. ಉತ್ಪಾದನೆಯ ತತ್ವ ನಮ್ಮ ಅಗತ್ಯಗಳನ್ನು ಕನಿಷ್ಠ ಮಾಡುವಂತಿರಬೇಕೇ ಹೊರತು ಗರಿಷ್ಠ ಮಾಡುವಂತಿರಬಾರದು.
3. ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ ಸ್ಪರ್ಧಾತ್ಮಕ ಮತ್ತು ಕೊಳ್ಳುಬಾಕ ಸಂಸ್ಕೃತಿಯನ್ನು ಬೆಳೆಸುವಂತಿರಬಾರದು. ಬದಲಾಗಿ ಅವು ಧರ್ಮದರ್ಶಿತ್ವದ ತತ್ವಗಳನ್ನು ಅನುಸರಿಸಬೇಕು.
4. ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಗಳು ವಿಕೇಂದ್ರೀಕರಣ ತತ್ವದ ಮೇಲೆ ಸ್ಥಾಪಿತವಾಗಬೇಕು[6]".

ದೇಶಗಳು ರಾಜಕೀಯ ದಾಸ್ಯದಿಂದ ಮುಕ್ತವಾಗುವಂತೆ, ಆರ್ಥಿಕವಾಗಿಯೂ ದಾಸ್ಯಮುಕ್ತವಾಗಬೇಕು. ಅಗತ್ಯಕಿಂತ ಹೆಚ್ಚಿನ ಸಂಪನ್ಮೂಲವು ಮನುಷ್ಯನನ್ನು ಲೋಭಿಯನ್ನಾಗಿ ಮಾಡುತ್ತದೆ. ಆಸೆಗಳಿಗೆ ಕಡಿವಾಣ ಹಾಕಿದರೆ ಸರಳತೆ ಸಾಧ್ಯ. ಪ್ರಕೃತಿಗೆ ನಮ್ಮ ಅಗತ್ಯಗಳನ್ನು ಪೂರೈಸುವ ಶಕ್ತಿ ಇದೆ, ದುರಾಸೆಗಳನ್ನಲ್ಲ. ಅಭಿವೃದ್ಧಿಯ ಮುಖವಾಡ ಹಾಕಿ ಲೌಕಿಕ ಭೋಗೈಶ್ವರ್ಯಗಳಲ್ಲಿ ಮೆರೆಯುತ್ತಿರುವವರು ನೈತಿಕ ಬದುಕಿಗೆ ಮರಳಬೇಕಾದ ಅಗತ್ಯವಿದೆ.

"ನ್ಯಾಯಯುತ ಸಮಾಜ ನಿರ್ಮಾಣ ಅಭಿವೃದ್ಧಿಯ ಗುರಿ. ನ್ಯಾಯಯುತ ಸಮಾಜ ಈ ಕೆಳಗಿನ ಲಕ್ಷಣಗಳನ್ನು ಹೊಂದಿದೆ. ಒಂದು, ಸಮಾಜ ಎಲ್ಲರಿಗೂ ಊಟ, ವಸತಿ, ಶಿಕ್ಷಣ, ಆರೋಗ್ಯ ಇತ್ಯಾದಿ ಮೂಲ ಸೌಕರ್ಯಗಳ ಕೊರತೆ ಇರಬಾರದು. ಎರಡು, ಈ ಮೂಲ ಸೌಕರ್ಯಗಳನ್ನು ಸರಕಾರ ಅಥವಾ ಇನ್ಯಾವುದೋ ಏಜೆನ್ಸಿಗಳು ಜನರಿಗೆ ನೀಡುವುದಲ್ಲ. ಮೂರು, ಈ ಎಲ್ಲ ಮೂಲ ಸೌಕರ್ಯಗಳನ್ನು ಜನರು ದುಡಿದು ಗಳಿಸುವ ಪರಿಸರ ನಿರ್ಮಿಸುವುದು ಅಧಿಕಾರಸ್ಥರ ಜವಾಬ್ದಾರಿ. ಜನರು ದುಡಿದು ಗಳಿಸುವ ಪರಿಸರ ಮೂರು ಸಂಗತಿಗಳನ್ನು ಒಳಗೊಂಡಿದೆ. ಒಂದು, ಭೌತಿಕ ಪರಿಸರ, ಎರಡು, ಸಾಮಾಜಿಕ ಪರಿಸರ ಮತ್ತು ಮೂರು, ಸಾಂಸ್ಕೃತಿಕ ಪರಿಸರ. ಭೂಮಿ, ಹಣಕಾಸು, ಸಾರಿಗೆ, ಸಂಪರ್ಕ, ಶಿಕ್ಷಣ, ಆರೋಗ್ಯ ಇವೆಲ್ಲವೂ ಭೌತಿಕ ಪರಿಸರದೊಳಗೆ ಬರುವ ಸಂಗತಿಗಳು. ಲಿಂಗ, ಜಾತಿ, ಧರ್ಮ ತಾರತಮ್ಯಗಳಿಲ್ಲದ ಸ್ಥಿತಿಯನ್ನು ಸಾಮಾಜಿಕ ಪರಿಸರ ಸೂಚಿಸುತ್ತದೆ. ಸಮಾನತೆ, ಸ್ವಾತಂತ್ರ್ಯ ಹಾಗೂ ಭಾತೃತ್ವಗಳು ಸಾಂಸ್ಕೃತಿಕ ಪರಿಸರದ ಲಕ್ಷಣಗಳು[7]". ತಳಸ್ತರದ ಜನರನ್ನೊಳಗೊಂಡಂತೆ ದೇಶದ ಎಲ್ಲರಿಗೂ ಇಂತಹ ಉತ್ತಮ ವ್ಯವಸ್ಥೆಯೊಂದನ್ನು ನಿರ್ಮಿಸುವುದು ಜನಸರ್ಕಾರದ ಆದ್ಯ ಕರ್ತವ್ಯವಾಗಿದೆ. ಇಂತಹ ವಾತಾವರಣದಲ್ಲಿ ಪ್ರಜೆಗಳು ತಮ್ಮ ಶಕ್ತಿ–ಸಾಮರ್ಥ್ಯದಿಂದ ಮಾನವೀಯ ಜೀವಚೈತನ್ಯ ಕಂಡುಕೊಳ್ಳುವರು. ಅಭಿವೃದ್ಧಿಯು ಕೇವಲ ಅಂಕಿಸಂಖ್ಯೆಗಳ ಆರ್ಥಿಕ ಪ್ರಭಾವವಲ್ಲ. ಅದು ಈ ಲೋಕದ ಕಟ್ಟಕಡೆಯ ಮನುಷ್ಯನ ಸಾಂಸ್ಕೃತಿಕ ಬದುಕು ಕೂಡ.

**ಅಡಿ ಟಿಪ್ಪಣಿ**

1. ವಿನಯಲಾಲ್, ಆಶೀಶ್‌ನಂದಿ, ಹೊಸ ಶತಮಾನಕ್ಕೆ ಹೊಸ ಪರಿಭಾಷೆ, ಪುಟ 28
2. ಚಂದ್ರಪೂಜಾರಿ ಎಂ, ಅಭಿವೃದ್ಧಿ ಸಿದ್ಧಾಂತಗಳು, ಪುಟ 4
3. ವಿನಯಲಾಲ, ಆಶೀಶ್‌ನಂದಿ, ಹೊಸ ಶತಮಾನಕ್ಕೆ ಹೊಸ ಪರಿಭಾಷೆ, ಪುಟ 30
4. ಚಂದ್ರಪೂಜಾರಿ ಎಂ. ಅಭಿವೃದ್ಧಿ ಸಿದ್ಧಾಂತಗಳು, ಪುಟ 29
5. ಚಂದ್ರಪೂಜಾರಿ ಎಂ. ಅಭಿವೃದ್ಧಿ ಸಿದ್ಧಾಂತಗಳು, ಪುಟ 30
6. ಶ್ರೀಧರ ಬಿ.ಎ. ಬಾಪುಚಿಂತನೆ, ಪುಟ 462
7. ಚಂದ್ರಪೂಜಾರಿ ಎಂ. ಅಭಿವೃದ್ಧಿ ಸಿದ್ಧಾಂತಗಳು, ಪುಟ 31

**ಆಕರ ಗ್ರಂಥಗಳು :**

1. ಚಂದ್ರಪೂಜಾರಿ ಎಂ, ಅಭಿವೃದ್ಧಿ ಸಿದ್ಧಾಂತಗಳು, 2017, ಕನ್ನಡ ವಿಶ್ವವಿದ್ಯಾಲಯ ಹಂಪಿ.
2. ವಿನಯಲಾಲ್, ಆಶೀಶ್‌ನಂದಿ(ಸಂ), ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು, 2010, ಅಕ್ಷರ ಪ್ರಕಾಶನ ಹೆಗ್ಗೋಡು.
3. ಶ್ರೀಧರ ಬಿ.ಎ. ಬಾಪು ಚಿಂತನೆ, 2008, ಮುದ್ದುಶ್ರೀ ಗ್ರಂಥಮಾಲೆ ಬೆಂಗಳೂರು.


© Copyright @ Authors